ಖರ್ಚು ಮಾಡಲಾದ ಹಣ : 12.68 ಲಕ್ಷ
ಬೇಕಾದ ಉಳಿದ ಹಣ : 24.32 ಲಕ್ಷ
ಅಂದಾಜು ವೆಚ್ಚ : 37.00 ಲಕ್ಷ
ಕಟ್ಟಡವನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು.
1996-97 ನೇ ಸಾಲಿಗೆ 15.00 ಲಕ್ಷ ರೂ ಈ ಕಾಮಗಾರಿಗೆ ಒದಗಿಸಲಾಗಿದೆ.

ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಮತ್ತು ವಾರ್ತಾ ಸಚಿವರು)

ವಿಷಯ:- ಶಿಕಾರಿಪುರ-ಹಾರೋಗೊಪ್ಪ ಜೋಡಿರಸ್ತೆ ನಿರ್ಮಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :- 41 (202)

ಶ್ರೀ ಬಿ.ಎಸ್. ಯಡಿಯೂರಪ್ಪ:- (ಶಿಕಾರಿಪುರ)

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿಕಾರಿಪುರ ಸವಳಂಗ ಶಿವಮೊಗ್ಗ ರಸ್ತೆಯಲ್ಲಿ ಶಿಕಾರಿಪುರದಿಂದ ಹಾರೋಗೊಪ್ಪದವರೆಗೆ ಜೋಡಿ ರಸ್ತೆ ನಿರ್ಮಾಣದ ಪ್ರಸ್ತಾವನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ:- ಸರ್ಕಾರದಲ್ಲಿ ಒಂದು ಪ್ರಸ್ತಾವನೆ ಸ್ವೀಕೃತವಾಗಿದ್ದು, ಸಧ್ಯದಲ್ಲಿ ಪ್ರಸ್ತಾಪವನ್ನು ಪರಿಗಣಿಸಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈ ಯೋಜನೆಯ ಅಂದಾಜು ವೆಚ್ಚವೆಷ್ಟು ಹಾಗೂ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು:- ಒಂದು ರೇಖಾ ಅಂದಾಜಿನಂತೆ ಸುಮಾರು 150.00 ಲಕ್ಷ ರೂ.ಗಳಾಗುತ್ತದೆ. ಕಾಮಗಾರಿಯನ್ನು ಪ್ರಾರಂಭಿಸುವ ಪ್ರಸ್ತಾಪ ಇರುವುದಿಲ್ಲ.

ಶ್ರೀ ಎಂ.ಸಿ. ಉದಾಸಿ
(ಲೋಕೋಪಯೋಗಿ ಸಚಿವರು)

ವಿಷಯ:- ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪದ ಶೀಥಲೀಕರಣ ಘಟಕದ ಯಂತ್ರೋಪಕರಣದ ಬದಲಾವಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:- 42 (203)

ಶ್ರೀ ಬಿ.ಎಸ್. ಯಡಿಯೂರಪ್ಪ:- (ಶಿಕಾರಿಪುರ)

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪ ಹಾಲು ಶೀಥಲೀಕರಣ ಘಟಕವನ್ನು ಎಂದು ಪ್ರಾರಂಭಿಸಲಾಯಿತು. ಈ ಘಟಕಕ್ಕೆ ಯಂತ್ರೋಪಕರಣಗಳನ್ನು ಯಾವ ಸಂಸ್ಥೆಯಿಂದ ಎಷ್ಟು ವೆಚ್ಚದಲ್ಲಿ ಯಾವಾಗ ಖರೀದಿಸಲಾಯಿತು?:- ಶಿವಮೊಗ್ಗ ಜಿಲ್ಲಾ ಸಮಗ್ರ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ನಿರ್ಮಿಸಲಾದ ದಿನ 2000 ಲೀಟರ್ ಸಾಮರ್ಥ್ಯದ ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪ ಹಾಲು ಶೀಥಲೀಕರಣ ಕೇಂದ್ರವನ್ನು ದಿನಾಂಕ 18.11.88ರಲ್ಲಿ

ಪ್ರಾರಂಭಿಸಲಾಯಿತು. ಈ ಶೀಥಲೀಕರಣ ಕೇಂದ್ರಕ್ಕೆ ಯಂತ್ರೋಪಕರಣಗಳನ್ನು ಬಳ್ಳಾರಿ ಜಿಲ್ಲೆಯ ಗಂಗಾವತಿ ಶೀಥಲೀಕರಣ ಕೇಂದ್ರದಿಂದ ಸ್ಥಳಾಂತರಿಸುವುದರ ಜೊತೆಗೆ ಸಪರೇಟರನ್ನು ಮೆಸರ್ಸ್ ಅಲ್ವಾಲಾವಲ್‌ನಿಂದ, ಜನರೇಟರನ್ನು ಮೆಸರ್ಸ್ ಗ್ರೀವ್ಸ್ ಕಾಟನ್ ಕಂಪನಿಯವರಿಂದ 1986 ರಲ್ಲಿ ಖರೀದಿಸಲಾಯಿತು. ಇದಕ್ಕೆ ತಗಲಿದ ಒಟ್ಟು ವೆಚ್ಚ ರೂ.9,90,095-65

ಆ) ಈ ಶೀಥಲೀಕರಣ ಘಟಕ ಯಂತ್ರೋಪಕರಣಗಳು ಕಳಪೆ ಮಟ್ಟದ್ದಾಗಿದ್ದು ಈ ಘಟಕದ ಉತ್ಪಾದನೆಯಾದಾಗಿನಿಂದ ಈವರೆಗೆ ಉತ್ಪಾದನೆಯನ್ನೇ ಮಾಡದಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ:- ಶೀಥಲೀಕರಣ ಘಟಕದ ಯಂತ್ರೋಪಕರಣಗಳು ಕಳಪೆ ಗುಣಮಟ್ಟದಾಗಿರುವುದಿಲ್ಲ ಗಂಗಾವತಿಯಲ್ಲಿ ಜಾಲ್ತಿಯಲ್ಲಿದ್ದ ಯಂತ್ರೋಪಕರಣಗಳನ್ನು ಸ್ಥಳಾಂತರಿಸಲಾಗಿರುತ್ತದೆ. ಸದರಿ ಶೀಥಲೀಕರಣ ಘಟಕಕ್ಕೆ ಸೇರಿದ ಕ್ಷೀರ ಮಾರ್ಗದಿಂದ ದಿನ ಒಂದಕ್ಕೆ ಸರಾಸರಿ 650 ಲೀಟರ್ ಹಾಲು ಬರುತ್ತಿದ್ದು ಇದು ಸದರಿ ಘಟಕ ಒಟ್ಟು ಸಾಮರ್ಥ್ಯದ ಶೇಕಡ 32 ರಷ್ಟು ಮಾತ್ರ ಆಗದ್ದು, ಇದರಿಂದ ನಿರ್ವಹಣಾ ಮತ್ತು ಸಾಗಾಣಿಕ ವೆಚ್ಚ ಹೆಚ್ಚಾಗಿ ಆರ್ಥಿಕ ನಷ್ಟವನ್ನು ಅನುಭವಿಸಿದ್ದ ಕಾರಣ ತಾತ್ಕಾಲಿಕವಾಗಿ ಶೀಥಲೀಕರಣ ಕೇಂದ್ರದ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿದೆ.

ಇ) ಈ ಘಟಕದ ಯಂತ್ರೋಪಕರಣಗಳನ್ನು ಬದಲಾಯಿಸಿ ಹೊಸ ಯಂತ್ರೋಪಕರಣಗಳಿಂದ ಪುನರುಜ್ಜೀವನಗೊಳಿಸಲು ಕ್ರಮಕೈಗೊಳ್ಳಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಯಾವಾಗ ಕ್ರಮಕೈಗೊಳ್ಳಲಾಗುವುದು?:- ಈ ಘಟಕಕ್ಕೆ ಯಂತ್ರೋಪಕರಣಗಳನ್ನು ಬದಲಾಯಿಸಿ 10,000 ಲೀಟರ್ ಸಾಮರ್ಥ್ಯದ ಅಮೋನಿಯಂ ಕಂಪ್ರೆಸರ್ ಪ್ಲಾಂಟ್ ಸ್ಥಾಪಿಸಲು ನಿರ್ಧರಿಸಿದ್ದು ಇದಕ್ಕೆ ಸುಮಾರು ರೂ.23.00 ಲಕ್ಷ ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದ್ದು ಇದಕ್ಕಾಗಿ ಶಿವಮೊಗ್ಗ ಜಿಲ್ಲಾ ಪರಿಷತ್ತು ಮತ್ತು ಮಲೆನಾಡು ಅಭಿವೃದ್ಧಿ ನಿಗಮದಿಂದಲೂ ಆರ್ಥಿಕ ನೆರವು ಕೋರಲಾಗಿದೆ.

ಒಂದು ವೇಳೆ ಆರ್ಥಿಕ ನೆರವು ಮೇಲಿನ ಸಂಸ್ಥೆಗಳಿಂದ ಬರುವುದು ತಡವಾದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ವತಿಯಿಂದಲೇ ಅಮೋನಿಯಾ ಪ್ಲಾಂಟನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಬಿ.ಬಿ.ನಿಂಗಯ್ಯ
(ಪಶುಸಂಗೋಪನಾ ರಾಜ್ಯ ಸಚಿವರು)

ವಿಷಯ:- ದೆಹಲಿಯ ಕರ್ನಾಟಕ ವಾರ್ತಾ ಭವನದ ಸುಧಾರಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:- 43(143)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ)

ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗೆಳಿಗೆ ದಯವಿಟ್ಟು ಉತ್ತರಿಸುವರೆ

ಅ) ದೆಹಲಿಯಲ್ಲಿರುವ ಕರ್ನಾಟಕ ವಾರ್ತಾ ಭವನವನ್ನು ಸುಧಾರಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?:- ನವದೆಹಲಿಯಲ್ಲಿರುವ ಕರ್ನಾಟಕ ವಾರ್ತಾ ಕೇಂದ್ರಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಮೂರು ವಿಷಯಗಳಿಗೆ ತುರ್ತಾಗಿ ಗಮನ ಹರಿಸುವುದು